# ಸುಂದರಾಂಗ ಸುಶಾಂತ್



ಸುಶಾಂತ್‌ಸಿಂಗ್ ರಜಪೂತ್ ಬಾಲಿವುಡ್‌ನ ಸುರಸುಂದರಾಂಗ ನಟ. ಆತನ ಮುಖದ ತ್ವಚೆಯ ಹೊಳಪು ಕೆಲವು ಬಾಲಿವುಡ್ ನಟಿಯರಿಗಿಂತಲೂ ಚೆನ್ನಾಗಿದೆ. ಆದಕ್ಕೆಂದೇ ಫೇರ್‌ನೆಸ್ ಕ್ರೀಮ್ ಕಂಪೆನಿಯೊಂದು ತನ್ನ ಜಾಹೀರಾತಿನಲ್ಲಿ ನಟಿಸಲು ಆತನನ್ನು ಸಂಪರ್ಕಿಸಿತು. 15 ಕೋಟಿ ರೂಪಾಯಿ ಸಂಭಾವನೆಯ ಆಫರ್ ನೀಡಿತು. ಆದರೆ ಸುಶಾಂತ್ ಗಟ್ಟಿ ಧ್ವನಿಯಲ್ಲಿ ‘ನೋ’ ಎಂದಿದ್ದಾನೆ!

‘ಯಾವುದೇ ಉತ್ಪನ್ನದ ವಿಶ್ವಾಸಾರ್ಹತೆ ಗೊತ್ತಿಲ್ಲದೆ ನಾನು ಆ ಜಾಹೀರಾತಿನಲ್ಲಿ ನಟಿಸುವುದಿಲ್ಲ. ನನಗೂ ಸಾಮಾಜಿಕ ಜವಾಬ್ದಾರಿ ಇದೆ. ಚರ್ಮದ ಬಣ್ಣದ ಮೇಲೆ ಜನರ ನಡುವೆ ತಾರತಮ್ಯ ಉಂಟು ಮಾಡುವುದು ಸರಿಯಲ್ಲ’ ಎನ್ನುವುದು ಆತನ ಉತ್ತರ. ಬಾಲಿವುಡ್ ಮೆಚ್ಚಿ ಭೇಷ್ ಎಂದಿದೆ. ಕಳೆದ ವರ್ಷ ಕಂಗನಾ ರನೌತ್ ಕೂಡಾ ಹೀಗೆಯೇ ದೊಡ್ಡ ಮೊತ್ತದ ಜಾಹೀರಾತೊಂದನ್ನು ತಿರಸ್ಕರಿಸಿದ್ದಳು. ಸುಶಾಂತ್ ಅಭಿನಯದ ‘ಕೇದಾರ್‌ನಾಥ್’ ಚಿತ್ರದ ಶೂಟಿಂಗ್ ನಡೆದಿದೆ.



# ಮದುವೇನೂ ಆಗಿಲ್ಲ ಮನೇನೂ ನಂದಲ್ಲ!

ಮಲ್ಲಿಕಾ ಶೆರಾವತ್ ಮಾಧ್ಯಮಗಳ ವಿರುದ್ಧ ಸಿಟ್ಟಿನಿಂದ ಕುದಿಯುತ್ತಿದ್ದಾಳೆ. ‘ಪ್ಯಾರಿಸ್‌ನಲ್ಲಿ ಮನೆ ಬಾಡಿಗೆ ಕಟ್ಟದ ಮಲ್ಲಿಕಾ ಮತ್ತು ಆಕೆಯ ಗಂಡ ಸಿರಿಲ್ ಆಕ್ಷೆನ್ಫಾನ್ಸ್ ಇಬ್ಬರಿಗೂ ಸ್ಥಳೀಯ ಕೋರ್ಟ್ 94,000 ಡಾಲರ್ ದಂಡ ವಿಧಿಸಿದ್ದು, ಮನೆ ಖಾಲಿ ಮಾಡಬೇಕೆಂದು ಆದೇಶಿಸಿದೆ’ ಎನ್ನುವ ಸುದ್ದಿಯೇ ಮಲ್ಲಿಕಾಳ ಕೋಪಕ್ಕೆ ಕಾರಣ. ಪ್ಯಾರಿಸ್‌ನಲ್ಲಿ ಚಳಿಗಾಲದಲ್ಲಿ ಯಾರನ್ನೂ ಮನೆ ಖಾಲಿ ಮಾಡಿಸಬಾರದು ಎನ್ನುವ ಕಾಯ್ದೆ ಇರುವುದರಿಂದ ಮಾರ್ಚ್ 31ರವರೆಗೆ ಆ ಮನೆಯಲ್ಲೇ ದಂಪತಿ ಇರಬಹುದು ಎಂದೂ ಕೋರ್ಟ್ ಹೇಳಿದೆ.

ಪ್ಯಾರಿಸ್‌ನ ಪ್ರತಿಷ್ಠಿತ ಸಿಕ್ಸ್ಟೀನ್ತ್ ಡಿಸ್ಟ್ರಿಕ್ಟ್‌ನ ಲಕ್ಸುರಿ ಅಪಾರ್ಟ್‌ಮೆಂಟ್‌ನಲ್ಲಿ ಕಳೆದ ವರ್ಷ ಜನವರಿ 1ರಿಂದ ಮಲ್ಲಿಕಾ ಮತ್ತು ಆಕೆಯ ಗಂಡ ವಾಸವಾಗಿದ್ದರಂತೆ. ‘ತಿಂಗಳಿಗೆ 6054 ಯೂರೋ ಬಾಡಿಗೆ ಕೊಡುವುದೆಂದು ನಿಶ್ಚಯವಾಗಿತ್ತು. ಆದರೆ ಮನೆ ಸೇರಿದಾಗ ಒಮ್ಮೆ 2715 ಯೂರೋ ಕೊಟ್ಟದ್ದು ಬಿಟ್ಟರೆ ಆಮೇಲೆ ಬಾಡಿಗೆಯನ್ನೇ ಕೊಟ್ಟಿಲ್ಲ’ ಎಂದು ಮನೆಯ ಯಜಮಾನ ದೂರು ಕೊಟ್ಟಿದ್ದ. ಇದೇ ಮನೆಯಲ್ಲಿದ್ದಾಗ ಮಲ್ಲಿಕಾ ಮತ್ತು ಸಿರಿಲ್ ಮೇಲೆ ಡಕಾಯಿತರು ದಾಳಿ ಮಾಡಿ ಆಭರಣಗಳನ್ನು ದೋಚಿದ್ದು ಕಳೆದ ವರ್ಷ ಸುದ್ದಿಯಾಗಿತ್ತು. ಆಗ ಮಲ್ಲಿಕಾ, ‘ಪ್ಯಾರಿಸ್‌ನಲ್ಲಿ ರಜೆ ಕಳೆಯಲು ಬಂದಿದ್ದೆ. ಈ ದುರದೃಷ್ಟಕರ ಘಟನೆ ನಡೆದಿದೆ’ ಎಂದಿದ್ದು ಸುದ್ದಿಯಾಗಿತ್ತು.

ಆದರೆ ಈಗ ಕೋರ್ಟ್ ತೀರ್ಪು ಬರುತ್ತಿದ್ದಂತೆಯೇ ‘ಗರಂ’ ಆಗಿರುವ ಮಲ್ಲಿಕಾ, ‘ನನಗೆ ಪ್ಯಾರಿಸ್‌ನಲ್ಲಿ ಮನೆಯೇ ಇಲ್ಲ. ಎಂಟು ತಿಂಗಳಿಂದ ನಾನು ಪ್ಯಾರಿಸ್‌ಗೆ ಹೋಗಿಯೇ ಇಲ್ಲ. ಅಲ್ಲಿ ನನ್ನ ಬ್ಯಾಂಕ್ ಅಕೌಂಟೂ ಇಲ್ಲ. ಎಲ್ಲ ಸುಳ್ಳು’ ಎಂದಿದ್ದಾಳೆ. ಜತೆಗೆ ‘ನಾನು ಸಿರಿಲ್‌ನನ್ನು ಮದುವೆಯಾಗಿಲ್ಲ. ಅವನು ಯೂರೋಪ್‌ನಲ್ಲಿ ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದಾನೆ. ನಾನಿರೋದು ಮುಂಬೈಯಲ್ಲಿ. ಅವನ ವಹಿವಾಟಿಗೂ ನನಗೂ ಯಾವ ಸಂಬಂಧವೂ ಇಲ್ಲ’ ಎಂದೂ ಸ್ಪಷ್ಟನೆ ನೀಡಿದ್ದಾಳೆ!

ಮರ್ಡರ್, ಪ್ಯಾರ್ ಕೆ ಸೈಡ್ ಎಫೆಕ್ಟ್ಸ್, ಡಬಲ್ ಧಮಾಲ್ ಮುಂತಾದ ಯಶಸ್ವಿ ಚಿತ್ರಗಳ ನಟಿಯಾದ ಮಲ್ಲಿಕಾ, ಸದ್ಯಕ್ಕೆ ಝೀನತ್ ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದಾಳೆ. ಮುಂಬೈಯಲ್ಲಿ ಟೀವಿ ರಿಯಾಲಿಟಿ ಶೋ ಒಂದರಲ್ಲೂ ಆಕೆ ಈಚೆಗೆ ಕಾಣಿಸಿಕೊಂಡಿದ್ದಾಳೆ.

■ ಬಿಂದು